	ಪಟ್ಟಣ	ಗ್ರಾಮಾಂತರ	ಒಟ್ಟು
1. ಸವಣೂರು	5	215	220
2. ಶಿಗ್ಗಾಂವ್	84	808	892
ಒಟ್ಟು	89	1023	1112

ಈ) ಸದರಿ ತಾಲೂಕುಗಳಲ್ಲಿ ಹಸಿರು ಕಾರ್ಡುಗಳಿಗಾಗಿ ಬಾಕಿ ಉಳಿದಿರುವ ಅರ್ಜಿಗಳ ವಿವರ ಕೆಳಗಿನಂತಿರುತ್ತದೆ:

1. ಸವಣೂರು ತಾಲ್ಲೂಕು	500
2. ಶಿಗ್ಗಾಂವ್ ತಾಲ್ಲೂಕು	615
ಒಟ್ಟು	1115

ಉ) ಸರ್ಕಾರವು ಸುತ್ತೋಲೆ ಸಂಖ್ಯೆ: ಎಫ್‌ಸಿಎಸ್ 20 ಡಿಆರ್‌ಎ 97 ದಿನಾಂಕ 15-4-98ರಲ್ಲಿ ಹೊಸ ಪಡಿತರ ಚೀಟಿಗಳನ್ನು ನೀಡಲು ಸುತ್ತೋಲೆ ಹೊರಡಿಸಿದೆ. ಅದರಂತೆ ಬಾಕಿ ಉಳಿದಿರುವ ಅರ್ಜಿಗಳನ್ನು ಪರಿಶೀಲಿಸಿ ಅರ್ಹ ಅರ್ಜಿದಾರರಿಗೆ ಹೊಸದಾಗಿ ಕಾರ್ಡುಗಳನ್ನು ವಿತರಿಸಲಾಗುವುದು.

ವಿಷಯ: ತುರುವೇಕೆರೆ ಕ್ಷೇತ್ರದಲ್ಲಿ ಆರ್.ಇ.ಸಿ. ಯೋಜನೆ.

893 (1226)

ಶ್ರೀ ಹೆಚ್.ಬಿ.ನಂಜೇಗೌಡ (ತುರುವೇಕೆರೆ): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುರುವೇಕೆರೆ ಕ್ಷೇತ್ರದಲ್ಲಿ ಆರ್.ಇ.ಸಿ. ಯೋಜನೆಯಲ್ಲಿ ಆಯ್ಕೆಯಾದ ಗ್ರಾಮಗಳೆಷ್ಟು?

ಆ) ಸದರೀ ಯೋಜನೆಗೆ ಎಷ್ಟು ಸಾಮಗ್ರಿಗಳನ್ನು ಒದಗಿಸಲಾಗಿದೆ?

ಇ) ಅಪೂರ್ಣಗೊಂಡಿರುವ ಗ್ರಾಮಗಳಿಗೆ ವಿದ್ಯುತ್ ಸಂಪರ್ಕ ಯಾವಾಗ ಕಲ್ಪಿಸಲಾಗುವುದು?

ಶ್ರೀ ಶರಣ ಬಸಪ್ಪ ದರ್ಶನಾಪುರ (ಇಂಧನ ರಾಜ್ಯ ಸಚಿವರು):

ಅ) 1981 ಜನಗಣತಿ ಪ್ರಕಾರ ತುರುವೇಕೇರೆ ತಾಲ್ಲೂಕಿನಲ್ಲಿ ಎಲ್ಲಾ 223 ಜನವಸತಿ

ಇರುವ, ಗ್ರಾಮಗಳನ್ನು 1988-89ರ ಸಾಲಿನ ಅಂತ್ಯದ ವೇಳೆಗಾಗಲೇ ವಿದ್ಯುದ್ದೀಕರಣಗೊಳಿಸಲಾಗಿದೆ. ಈ ತಾಲ್ಲೂಕಿನಲ್ಲಿ 1981ರ ಜನಗಣತಿ ಪ್ರಕಾರ ಗ್ರಾಮಗಳ ವಿದ್ಯುದ್ದೀಕರಣದಲ್ಲಿ ಶೇ. 100ರಷ್ಟು ಸಾಧನೆಯನ್ನು ಮಾಡಲಾಗಿದೆ.

ಪ್ರಸ್ತುತ ಈ ತಾಲ್ಲೂಕಿನಲ್ಲಿ 54 ಜನತಾ ಕಾಲೋನಿಗಳ ಮತ್ತು 28 ಹರಿಜನಬಸ್ತಿಗಳ ವಿದ್ಯುದ್ದೀಕರಣಕ್ಕೆ ಒಂದು ಆರ್.ಇ.ಸಿ. ಯೋಜನೆ ಮಂಜೂರಾಗಿದೆ. ಇದರಲ್ಲಿ 13 ಜನತಾ ಕಾಲೋನಿಗಳ ಮತ್ತು 2 ಹರಿಜನ ಬಸ್ತಿಗಳ ವಿದ್ಯುದ್ದೀಕರಣ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿದೆ.

ಆ ಮತ್ತು ಇ) ವಿದ್ಯುದ್ದೀಕರಣ ಕಾರ್ಯಕ್ಕೆ ಬೇಕಾಗಿರುವ ಕಂಬಗಳನ್ನು ಈಗಾಗಲೇ ಒದಗಿಸಲಾಗಿದೆ. ಎ.ಸಿ.ಎಸ್.ಆರ್. ವಿದ್ಯುತ್ ತಂತಿಗಳ ಸರಬರಾಜಿನಲ್ಲಿ ಸ್ವಲ್ಪ ವಿಳಂಬ ಉಂಟಾದುದರಿಂದ ವಿದ್ಯುದ್ದೀಕರಣ ಕಾರ್ಯದಲ್ಲಿ ಸ್ವಲ್ಪಮಟ್ಟಿಗೆ ಹಿನ್ನಡೆ ಉಂಟಾಗಿದೆ. ವಿದ್ಯುದ್ದೀಕರಣ ಕಾರ್ಯಕ್ಕೆ ಬೇಕಾಗಿರುವ ವಿದ್ಯುತ್ ತಂತಿಗಳನ್ನು ಸರಬರಾಜು ಮಾಡಲು ಕ್ರಮಕೈಗೊಂಡು ವಿದ್ಯುದ್ದೀಕರಣ ಕಾರ್ಯವನ್ನು ಚುರುಕುಗೊಳಿಸಲಾಗುವುದು.

ವಿಷಯ: ದ.ಕನ್ನಡ, ಉಡುಪಿ ಜಿಲ್ಲೆಗಳಲ್ಲಿ ಕಿಂಡಿ ಅಣೆಕಟ್ಟಿನ ಹಲಗೆಗಳಿಗೆ ಟಾರು ಬದಲಿಗೆ ಪೈಂಟ್ ಬಳಸುವಿಕೆ.

895 (1248)

ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ): ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆ ಮತ್ತು ಉಡುಪಿ ಜಿಲ್ಲೆಯಲ್ಲಿ ಕಿಂಡಿ ಅಣೆಕಟ್ಟಿನ ಹಲಗೆಗಳಿಗೆ ಹಿಂದಿನಿಂದ ಟಾರು ಹಾಕುತ್ತಿದ್ದು ಈಗ ಟಾರು ಹಾಕುವ ಬದಲು ಪೈಂಟ್ ಬಳಸುತ್ತಿರುವುದು ಸರಕಾರದವರ ಗಮನಕ್ಕೆ ಬಂದಿದೆಯೇ?

ಆ) ಕಿಂಡಿ ಅಣೆಕಟ್ಟುಗಳ ಅಂದಾಜು ಪಟ್ಟಿಯಲ್ಲಿ ಟಾರು ಎಂದು ನಮೂದಿಸಿದ್ದರೂ ದುಬಾರಿ ಬೆಲೆಯ ಪೈಂಟನ್ನು ಖರೀದಿಸಲು ಕಾರಣವೇನು?

ಇ) ಇದರಲ್ಲಿ ಲಕ್ಷಾಂತರ ರೂಪಾಯಿ ಅವ್ಯವಹಾರವಾಗಿದ್ದು ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕಾನೂನು ಕ್ರಮ ಕೈಗೊಳ್ಳಲು ಸರ್ಕಾರದವರು ಪರಿಶೀಲಿಸುವರೆ?

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂರ್ಜಲ ಅಭಿವೃದ್ಧಿ ಸಚಿವರು):

ಅ) ಬಂದಿದೆ.